ದಿನಾಂಕ 16–11–2012 ರಂದು ಬಹುಮಹಡಿಗಳ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ
ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಹನ್ನೆರಡನೇಯ ಸಭೆಯ ನಡುವಳಿಗಳು:

**ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಡಾ. ಬಿ.ವಿ. ಪಾಟೀಲ | ಅಧ್ಯಕ್ಷರು |
| 2. | ಶ್ರೀ ಭರತ್‌ಲಾಲ್ ಮೀನಾ | ಸದಸ್ಯರು |
| 3. | ಶ್ರೀ ಚಂದ್ರಶೇಖರ | ಸದಸ್ಯರು |
| 4. | ಶ್ರೀ ಅಶೋಕ ಜೇವರ್ಗಿ | ಸದಸ್ಯರು |
| 5. | ಶ್ರೀ ಎಂ.ವಿ. ಗುತ್ತೇದಾರ | ಸದಸ್ಯರು |
| 6. | ಶ್ರೀ ಅಲ್ಲಮಪ್ರಭು ಪಾಟೀಲ | ಸದಸ್ಯರು |
| 7. | ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ | ಸದಸ್ಯರು |
| 8. | ಶ್ರೀ ಬಸವರಾಜ ಪಾಟೀಲ್ ಇಟಗಿ | ಸದಸ್ಯರು |
| 9. | ಶ್ರೀ ವೆಂಕನಗೌಡ ಮಲ್ಕಾಪುರ | ಸದಸ್ಯರು |
| 10. | ಶ್ರೀ ಶಂಕರಗೌಡ ಹರವಿ | ಸದಸ್ಯರು |
| 11. | ಶ್ರೀ ಭೋಜನಗೌಡ | ಸದಸ್ಯರು |
| 12. | ಶ್ರೀ ಜಿ. ತಿಮ್ಮನಗೌಡ ಪಾಟೀಲ್ | ಸದಸ್ಯರು |
| 13 | ಡಾ. ಎಸ್.ಜಿ. ಪಾಟೀಲ | ಸದಸ್ಯರು |
| 14 | ಡಾ. ಡಿ.ಪಿ. ಬಿರಾದಾರ | ಸದಸ್ಯ–ಕಾರ್ಯದರ್ಶಿ |

ಪ್ರಾರಂಭದಲ್ಲಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹನ್ನೆರಡನೇಯ ಸಭೆಗೆ ಸರ್ವಸದಸ್ಯರನ್ನು ಹಾಗೂ ಪ್ರಥಮ ಬಾರಿಗೆ ಭಾಗವಹಿಸಿದ ಶ್ರೀ ಚಂದ್ರಶೇಖರ, ಕೃಷಿ ಆಯುಕ್ತರವರನ್ನು ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಕಾರ್ಯಸೂಚಿಯ ವಿಷಯವಾರು ಪ್ರಕಾರ ಒಂದೊಂದಾಗಿ ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| **ಅನುಕ್ರಮ ಸಂ: 1** | **ದಿನಾಂಕ 18–8–2012 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹನ್ನೊಂದನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅವುಗಳ ಪ್ರಕಾರ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು** |

**ಠರಾವು:**

ವಿಸ್ತೃತವಾದ ಚರ್ಚೆಯ ನಂತರ, ದಿನಾಂಕ 18–8–2012 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹನ್ನೊಂದನೇಯ ಸಭೆಯ ನಡುವಳಿಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು ಮುಂದುವರೆದು, ಅವುಗಳ ಪ್ರಕಾರ ಕೈಕೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.
(ಕ್ರಮ : ಕುಲಸಚಿವರು)

| | |
|---|---|
| **ಅನುಕ್ರಮ ಸಂ: 2** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ರಾಜಸ್ಥಾನದ ವಿವಿಧ ಕೃಷಿ ಸಂಶೋಧನಾ ಸಂಸ್ಥೆಗಳಿಗೆ ಭೇಟಿ ನೀಡುವ ಕುರಿತು.** |

**ಠರಾವು:**

ಸುದೀರ್ಘ ಚರ್ಚೆಯ ನಂತರ, ಸದರಿ ಪ್ರಸ್ತಾವನೆಗೆ ಸ್ವಲ್ಪ ಮಾರ್ಪಾಡು ಮಾಡಿ ರಾಜಸ್ಥಾನದ ವಿವಿಧ ಕೃಷಿ ಸಂಶೋಧನಾ ಸಂಸ್ಥೆಗಳಿಗೆ ಭೇಟಿ ನೀಡುವುದರ ಜೊತೆಗೆ ಶಿಮ್ಲಾ ಹಾಗೂ ನವದೆಹಲಿಗೆ ಭೇಟಿ ನೀಡುವುದನ್ನು ಸೇರಿಸುವುದರೊಂದಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಈ ಪ್ರವಾಸ ಕಾರ್ಯಕ್ರಮವನ್ನು ಜನವರಿ 2013 ರ ಕೊನೆಯ ವಾರದಿಂದ ಕೈಗೊಳ್ಳುವಂತೆ ಕ್ರಮ ಕೈಗೊಳ್ಳಲು ಸಹ ಸಲಹೆ ನೀಡಲಾಯಿತು.
(ಕ್ರಮ : ಸಂಶೋಧನಾ ನಿರ್ದೇಶಕರು)

| ಅನುಕ್ರಮ ಸಂ: 3 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮೂರನೇಯ ಘಟಿಕೋತ್ಸವಕ್ಕೆ ಅತಿಥಿಗಳನ್ನು ನಿಗದಿಪಡಿಸುವ ಕುರಿತು. |
|---|---|

**ಠರಾವು:**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮೂರನೇಯ ಘಟಿಕೋತ್ಸವ ಭಾಷಣವನ್ನು ಮಾಡಲು ಅನುಕ್ರಮವಾಗಿ ಪ್ರಸ್ತಾಪಿಸಿದವರಲ್ಲಿ ಒಬ್ಬರನ್ನು ಘನವೆತ್ತ ರಾಜ್ಯಪಾಲರ ಒಪ್ಪಿಗೆ ಪಡೆದ ನಂತರ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಲು ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಅನುಮೋದಿಸಿತು. (ಕ್ರಮ : ಕುಲಸಚಿವರು)

| ಅನುಕ್ರಮ ಸಂ: 4 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.** |
|---|---|

**ಠರಾವು:**

ಸುದೀರ್ಘ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳುವ ಪ್ರಸ್ತಾವನೆಗೆ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಅದರಂತೆ, ಕಡಿಮೆ ದರ ನಮೂದಿಸಿದ ಬಿಡ್ಡುದಾರರಿಗೆ ಪ್ರತ್ಯೇಕವಾಗಿ ಸಿವಿಲ್ ಕಾಮಗಾರಿ ಆದೇಶಗಳನ್ನು ನೀಡಲು ಸಹ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.

ಮುಂದುವರೆದು, ಅಂತರ ರಾಷ್ಟ್ರೀಯ ಅತಿಥಿಗೃಹ ಕಟ್ಟಡ ನಿರ್ಮಾಣದಲ್ಲಿ ಅನಾವಶ್ಯಕ ವಿಳಂಬವಾಗುತ್ತಿರುವುದನ್ನು ಗಮನಿಸುತ್ತಾ, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಂಟ್ರ್ಯಾಕ್ಟರ್‌ಗೆ ನಿಯಮಾನುಸಾರ ಲೀಗಲ್ ನೋಟೀಸನ್ನು ನೀಡಲು ಕಾರ್ಯನಿರ್ವಾಹಕ ಅಭಿಯಂತರರಿಗೆ ಸೂಚಿಸಲಾಯಿತು. ಅರ್ಹ ಟೆಂಡರ್‌ದಾರರುಗಳಿಗೆ ಕಾಮಗಾರಿ ಕೈಗೊಳ್ಳಲು ಆದೇಶ ನೀಡುವುದಕ್ಕಿಂತ ಮುಂಚೆ, ಈ ತರಹದ ಕಾಮಾರಿಗಳ ಕಾರ್ಯ ಬಾಕಿ ಇವೆಯೇ ಎಂಬುದನ್ನು ದೃಢಪಡಿಸಿಕೊಳ್ಳುವಂತೆ ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ಮಾನ್ಯ ಕುಲಪತಿಗಳವರಿಗೆ ತಿಳಿಸಿದರು. (ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

| ಅನುಕ್ರಮ ಸಂ: 5 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2008–09 ಹಾಗೂ 2009–10 ನೇ ಸಾಲಿನ ವಾರ್ಷಿಕ ಖರ್ಚುವೆಚ್ಚಗಳಿಗೆ ಅನುಮೋದನೆ ಕುರಿತು.** |
|---|---|

**ಠರಾವು:**

ವಿಸ್ತೃತ ಚರ್ಚೆಯ ನಂತರ, 2008–09 ನೇ ಸಾಲಿನ ವಾರ್ಷಿಕ ಖರ್ಚುವೆಚ್ಚಗಳಿಗೆ ಘನ ವೇದಿಕೆಯು ಅನುಮೋದನೆ ನೀಡಿತು. 2009–10 ಹಾಗೂ 2010–11 ನೇ ಸಾಲಿನ ವಾರ್ಷಿಕ ಖರ್ಚುವೆಚ್ಚಗಳಿಗೆ ತಕ್ಷಣವೇ ಲೆಕ್ಕಪರಿಶೋಧನೆಯನ್ನು ಪೂರ್ಣಗೋಳಿಸಿ ಮೂರು ತಿಂಗಳೊಳಗೆ ಕ್ರಮ ಕೈಗೊಳ್ಳಲು ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ಸಲಹೆ ನೀಡಿದರು. (ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)

| ಅನುಕ್ರಮ ಸಂ: 6 | **ಹಣಕಾಸಿನ ಮಂಜೂರಾತಿಗಳಿಗೆ ಘಟನೋತ್ತರ ಅನುಮೋದನೆ ನೀಡುವ ಕುರಿತು.** |
|---|---|

**ಠರಾವು:**

ಚರ್ಚೆಯ ನಂತರ, ಹಣಕಾಸಿನ ಮಂಜೂರಾತಿಗಳ ಘಟನೋತ್ತರ ಅನುಮೋದನೆಗೆ ಘನ ವೇದಿಕೆಯು ಒಪ್ಪಿಗೆ ನೀಡುತ್ತಾ ಈ ತರಹದ ಮಂಜೂರಾತಿ ನೀಡಿದ್ದನ್ನು ತಕ್ಷಣವೇ ಮುಂಬರುವ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಮಂಡಿಸಲು ಸಲಹೆ ನೀಡಿತು. (ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)

| ಅನುಕ್ರಮ ಸಂ: 7 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಕೃಷಿ ಮೇಳಗಳನ್ನು ಏರ್ಪಡಿಸುವ ಸಲುವಾಗಿ ದಿನಾಂಕಗಳಿಗೆ ಅನುಮೋದನೆ ಕುರಿತು. |
|---|---|

**ಠರಾವು:**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಕೃಷಿ ಮೇಳಗಳನ್ನು ಏರ್ಪಡಿಸಲು ಪ್ರಸ್ತಾಪಿಸಲಾಗಿರುವ ದಿನಾಂಕಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ವಿಸ್ತರಣಾ ನಿರ್ದೇಶಕರು)

| **ಅನುಕ್ರಮ ಸಂ: 8** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2011-12 ನೇ ಸಾಲಿನ ವಾರ್ಷಿಕ ವರದಿಯನ್ನು ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸುವ ಕುರಿತು.** |
|---|---|

**ಠರಾವು:**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2011-12 ನೇ ಸಾಲಿನ ವಾರ್ಷಿಕ ವರದಿಯನ್ನು ಘನ ವೇದಿಕೆಯಲ್ಲಿ ಮಂಡಿಸಲಾಯಿತು. ಸದರಿ ಕರಡು ಪ್ರತಿಯಲ್ಲಿ ಸಲಹೆ / ತಿದ್ದುಪಡಿಗಳೇನಾದರು ಸೇರಿಸುವುದು ಇದ್ದಲ್ಲಿ ಅವುಗಳನ್ನು 15 ದಿನಗಳೊಳಗಾಗಿ ಒದಗಿಸಲು ಮಾನ್ಯ ಕುಲಪತಿಗಳವರು ಕೇಳಿಕೊಂಡರು. ಮಾನ್ಯ ವ್ಯವಸ್ಥಾಪನಾ ಮಂಡಳಿಯ ಎಲ್ಲಾ ಸದಸ್ಯರುಗಳ ಹಾಗೂ ವಿಶ್ವವಿದ್ಯಾಲಯದ ಅಧಿಕಾರಿಗಳ ಸಂಪರ್ಕಕ್ಕಾಗಿ ಟೆಲಿಫೋನ್ ನಂಬರ್‌ಗಳನ್ನು ವಾರ್ಷಿಕ ವರದಿಯಲ್ಲಿ ನಮೂದಿಸಲು ಸಲಹೆ ನೀಡಲಾಯಿತು. (ಕ್ರಮ : ವಿಸ್ತರಣಾ ನಿರ್ದೇಶಕರು)

| ಅನುಕ್ರಮ ಸಂ: 9 | ಗುತ್ತಿಗೆ ಆಧಾರದ ಮೇಲೆ ತೊಡಗಿಸಿಕೊಂಡಿರುವ ಕೃಷಿ ಪದವೀಧರರ ಮಾಸಿಕ ಗೌರವಧನವನ್ನು ಹೆಚ್ಚಿಸುವ ಕುರಿತು. |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, ಗುತ್ತಿಗೆ ಆಧಾರದ ಮೇಲೆ ತೊಡಗಿಸಿಕೊಂಡಿರುವ ಕೃಷಿ ಪದವೀಧರರ ಮಾಸಿಕ ಗೌರವಧನವನ್ನು ಕೊಡುವ ಪ್ರಸ್ತಾವನೆಗೆ ಅನುಮೋದನೆ ನೀಡಿತು ಹಾಗೂ ಪ್ರಸ್ತುತ ಪ್ರಸ್ತಾಪಿಸಿರುವ ಮೊತ್ತಕ್ಕಿಂತ ರೂ. 5000/- ರಷ್ಟು ಹೆಚ್ಚಾಗಿ ಎಲ್ಲಾ ವಿಧದ ಕೃಷಿ ಪದವೀಧರರಿಗೆ ಗೌರವ ಧನವನ್ನು ನೀಡಲು ಸಲಹೆ ನೀಡಿತು.

(ಕ್ರಮ : ಕುಲಸಚಿವರು)

| **ಅನುಕ್ರಮ ಸಂ: 10** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಿಬ್ಬಂದಿಯವರಿಗೆ ವೈದ್ಯಕೀಯ ವೆಚ್ಚವನ್ನು ಹಿಂತಿರುಗಿ ಪಡೆಯಲು ಆಸ್ಪತ್ರೆಗೆ ಮಾನ್ಯತೆ ಕೊಡುವ ಕುರಿತು.** |
|---|---|

**ಠರಾವು:**

ಬಹು-ವಿಶೇಷತೆ ಹೊಂದಿರುವ ಶ್ರೀ ಬಸವ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ರಾಯಚೂರು ಅನ್ನು ವಿಶ್ವವಿದ್ಯಾಲಯದ ಅಂಗೀಕೃತ ಆಸ್ಪತ್ರೆಗಳ ಪಟ್ಟಿಯಲ್ಲಿ ಸೇರಿಸುವ ಕುರಿತು ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| **ಅನುಕ್ರಮ ಸಂ: 11** | **ಶಿಕ್ಷಕರಿಗಾಗಿ ಸಿ.ಎ.ಎಸ್.-2006 ರ ಸಮಾನ ನಿಯಮಾವಳಿಗಳು ಹಾಗೂ ಸ್ಕೋರ್ ಕಾರ್ಡ್ ಕುರಿತು** |
|---|---|

**ಠರಾವು:**

ಸದರಿ ವಿಷಯವನ್ನು ಚರ್ಚಿಸಲಾಯಿತು ಹಾಗೂ ಮುಂದಿನ ಸಭೆಯಲ್ಲಿ ಮಂಡಿಸಲು ಮುಂದೂಡಲಾಯಿತು.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 12 | **ಶಿಕ್ಷಕರ ನೇರ ನೇಮಕಾತಿಗಾಗಿ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಸಮಾನ ಸ್ಕೋರ್ ಕಾರ್ಡ್** |
|---|---|

**ಠರಾವು:**

ಸದರಿ ವಿಷಯವನ್ನು ಚರ್ಚಿಸಲಾಯಿತು ಹಾಗೂ ಮುಂದಿನ ಸಭೆಯಲ್ಲಿ ಮಂಡಿಸಲು ಮುಂದೂಡಲಾಯಿತು.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 13 | **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.** |
|---|---|

**ಠರಾವು:**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾಪಿಸಿದಂತೆ ಟೆಂಡರ್ ಕರೆಯಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

| ಅನುಕ್ರಮ ಸಂ: 14 | **ಕೃಷಿ ಮಹಾವಿದ್ಯಾಲಯ ಗುಲಬರ್ಗಾದಲ್ಲಿಯ ಸಿವಿಲ್ ಕಾಮಗಾರಿಗಳಿಗಾಗಿ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯುವುದು ಹಾಗೂ ಸಿ.ಪಿ.ಡಬ್ಲ್ಯೂಡಿ. ಗೆ ವಹಿಸಿದ ಕಾಮಗಾರಿಗಳನ್ನು ರದ್ದುಗೊಳಿಸುವುದು.** |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, ಸಿ.ಪಿ.ಡಬ್ಲ್ಯೂಡಿ. ಯವರು ಸಲ್ಲಿಸಿದ ಕಾಮಗಾರಿಗಳ ಅಂದಾಜು ಪತ್ರಿಕೆಗಳು ತೀರಾ ಹೆಚ್ಚಾಗಿರುವುದರಿಂದ ಕೃಷಿ ಮಹಾವಿದ್ಯಾಲಯ ಗುಲಬರ್ಗಾದಲ್ಲಿಯ ಸಿವಿಲ್ ಕಾಮಗಾರಿಗಳನ್ನು ಸಿ.ಪಿ.ಡಬ್ಲ್ಯೂಡಿ. ಗೆ ವಹಿಸಲು ತೀರ್ಮಾನಿಸಿದ್ದನ್ನು ರದ್ದುಗೊಳಿಸಲು ಘನ ವೇದಿಕೆಯು ಅನುಮೋದನೆ ನೀಡಿತು. ಮುಂದುವರೆದು, ಸದರಿ ಕಾಮಗಾರಿಗಳಿಗಾಗಿ ಸರಕಾರದ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲು ತೀರ್ಮಾನಿಸಲಾಯಿತು.

(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

| ಅನುಕ್ರಮ ಸಂ: 15 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ 2012–13 ಸಾಲಿನ ವಿವಿಧ ಬೀಜೋತ್ಪಾದನಾ ಕಾರ್ಯಕ್ರಮಗಳು ಮತ್ತು ಬೀಜ ಗ್ರಾಮ ಯೋಜನೆಗಳ ಅನುಷ್ಠಾನಕ್ಕೆ ಬೇಕಾಗುವ ಹಣಕಾಸಿನ ಅನುಮೊದನೆ |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, ಸದರಿ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು.

(ಕ್ರಮ : ಬೀಜ ಅಧಿಕಾರಿಗಳು)

| ಅನುಕ್ರಮ ಸಂ: 16 | **ಕೃಷಿ ವಿಶ್ವವಿದ್ಯಾಲಯ, ರಾಯಚೂರು ಉತ್ಪಾದಿಸಿದ ಬೀಜಗಳಿಗೆ ಸ್ವತಂತ್ರ ಮಾರುಕಟ್ಟೆ ಕಲ್ಪಿಸುವ ಬಗ್ಗೆ** |
|---|---|

**ಠರಾವು:**

ಸದರಿ ವಿಷಯವನ್ನು ಸುದೀರ್ಘವಾಗಿ ಚರ್ಚಿಸಿದ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಎಲ್ಲಾ ಸಂಶೋಧನಾ ಕೇಂದ್ರಗಳು, ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಸ್ತರಣಾ ಕೇಂದ್ರಗಳಲ್ಲಿ ಬೀಜ ಮಾರುಕಟ್ಟೆ / ಮಾರಾಟ ಮಳಿಗೆಗಳನ್ನು ತೆರೆಯಲು ಘನ ವೇದಿಕೆಯು ಅನುಮೋದನೆ ನೀಡಿತು. ಮುಂದುವರೆದು, ಈ ಭಾಗದ ರೈತರಿಗೆ ವಿತರಿಸಲಾಗುವ ವಿಶ್ವವಿದ್ಯಾಲಯದ ಬೀಜಗಳಿಗೆ ಸಬ್ಸಿಡಿ ಸೌಲಭ್ಯ ಒದಗಿಸುವಂತೆ ವ್ಯವಸ್ಥಾಪನಾ ಮಂಡಳಿಯ ಸದಸ್ಯರೂ ಆದ ಸರಕಾರದ ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರಿಗೆ ಘನ ವೇದಿಕೆಯು ವಿನಂತಿಸಿಕೊಂಡಿತು.

(ಕ್ರಮ : ಬೀಜ ಅಧಿಕಾರಿಗಳು)

| ಹೆಚ್ಚುವರಿ ಅನುಕ್ರಮ ಸಂ: 1 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಅನುಪಯುಕ್ತ ವಾಹನಗಳ ವಿಲೇವಾರಿಗೆ ಅನುಮೋದನೆ ಕುರಿತು.** |
|---|---|

**ಠರಾವು:**

ಸದರಿ ವಿಷಯವನ್ನು ದೀರ್ಘವಾಗಿ ಚರ್ಚಿಸಿದ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಅನುಪಯುಕ್ತ ವಾಹನಗಳನ್ನು ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲು ಸಲಹೆ ನೀಡಿತು.

(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

| | |
|---|---|
| ಹೆಚ್ಚುವರಿ<br>ಅನುಕ್ರಮ ಸಂ: 2 | ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ರೂ.2.50 ಲಕ್ಷಗಳ ವರೆಗಿನ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದಲ್ಲಿ ಕೈಗೊಳ್ಳುವ ಕುರಿತು. |

**ಠರಾವು:**

ಸದರಿ ಪ್ರಸ್ತಾಪಿಸಿದ ವಿಷಯಕ್ಕೆ ಹಾಗೂ ಸರಕಾರದ ಆದೇಶದಂತೆ ರೂ. 1.00 ಲಕ್ಷದ ಬದಲಾಗಿ ರೂ. 2.50 ಲಕ್ಷದವರೆಗಿನ ಕಾಮಗಾರಿಗಳನ್ನು ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ತುಂಡು ಗುತ್ತಿಗೆ ಆಧಾರದಲ್ಲಿ ಕೈಗೊಳ್ಳಲು ಘನ ವೇದಿಕೆಯು ಅನುಮೋದನೆ ನೀಡಿತು. (ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

| | |
|---|---|
| ಹೆಚ್ಚುವರಿ<br>ಅನುಕ್ರಮ ಸಂ: 3 | ರದ್ದೇವಾಡಗಿಯ ಕೃಷಿ ಸಂಶೋಧನಾ ಕೇಂದ್ರದ ಅಭಿವೃದ್ಧಿಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಅನುಮೋದನೆ ಕುರಿತು. |

**ಠರಾವು:**

ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು ಹಾಗೂ ನೇರವಾಗಿ ರೈತರೊಂದಿಗೆ ಸಂಧಾನದ ಮುಖಾಂತರ ಖರೀದಿಗಾಗಿ ಸಮಿತಿಯನ್ನು ರಚಿಸಲು ಇಲ್ಲವಾದಲ್ಲಿ ಭೂ ಸ್ವಾಧೀನದ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸಲಹೆ ನೀಡಿತು. (ಕ್ರಮ : ಸಂಶೋಧನಾ ನಿರ್ದೇಶಕರು)

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /- 21-11-2012 | ಸಹಿ /- 21-11-2012 |
|---|---|
| (ಬಿ.ವಿ. ಪಾಟೀಲ)<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | (ಡಿ.ಪಿ. ಬಿರಾದಾರ)<br>ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಡಿ.ಪಿ. ಬಿರಾದಾರ)**
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.